# ಇದು ಹೂವು ಅಲ್ಲ ಹಣ್ಣು...



ನನಗೆ ಲ್ಯಾಂಡ್‌ಸ್ಕೇಪ್ ಫೋಟೋಗ್ರಫಿ ಹುಚ್ಚು ಹಿಡಿದ ನಂತರ ಹಲವಾರು ಪರಿಸರ ತಜ್ಞರ ಪರಿಚಯವಾಗಿದೆ. ಇತ್ತೀಚೆಗೆ ಸಸ್ಯ ವಿಜ್ಞಾನ ಉಪನ್ಯಾಸಕ ಹಾಗೂ ನನ್ನ ಹಿತೈಶಿ ಗಣೇಶ್ ಶೆಂಡೆಯವರಲ್ಲಿ ಮಾತನಾಡುತ್ತಿರಬೇಕಾದರೆ ನನ್ನ ಕಣ್ಣು ಅವರ ಟೇಬಲ್ ಮೇಲೆ ಬಿತ್ತು.

'ಸರ್, ಶೋಪೀಸ್ ತುಂಬಾ ಚೆನ್ನಾಗಿದೆ, ಎಲ್ಲಿಂದ ತಂದ್ರಿ' ಎಂದು ಕೇಳಿದೆ. ಯಾರಿಗಾದ್ರೂ ಗಿಫ್ಟ್ ಮಾಡಲಿಕ್ಕೆ ಒಳ್ಳೆ ಶೋಪೀಸ್ ಎಂದು ಮನದಲ್ಲೇ ಸ್ಕೆಚ್ ಹಾಕಿದೆ. ನನ್ನ ಮುಗ್ಧ ಪ್ರಶ್ನೆಗೆ ಅವರಿಗೆ ನಗು ಬಂದಿತ್ತು. 'ಇದು ಶೋಪೀಸ್ ಅಲ್ಲ ಮಾರಾಯ, ಪಶ್ಚಿಮ ಘಟ್ಟದಲ್ಲಿ ದೊರೆಯುವ ಅಪರೂಪದ ಹಣ್ಣು ಇದು' ಎಂದಾಗ ನನಗೆ ಅಚ್ಚರಿಯಾಯಿತು. 'ಏನು ಹೇಳುತ್ತಿದ್ದೀರಾ ಸರ್?'



ಎಂದು ನಾನು ಕೇಳಿದಾಗ ಅವರು ಅದರ ಬಯೋಡೆಟಾ ಹೇಳತೊಡಗಿದರು.

ಸಾಮಾನ್ಯ ಭಾಷೆಯಲ್ಲಿ ಇದನ್ನು ಹುಲಿತರಡು ಮರದ ಹಣ್ಣು ಎಂದು ಕರೆಯುತ್ತಾರೆ. ಇದೊಂದು ಜಾತಿಯ ಹಣ್ಣು. ಕಡುಕೆಂಪು ಬಣ್ಣದ ಇದು ನೋಡಲು ಆಕರ್ಷಕವಾಗಿದೆ. ಪಶ್ಚಿಮ ಘಟ್ಟದಲ್ಲಿ ಹೆಚ್ಚಾಗಿ ಕಂಡುಬರುವ ಈ ಮರ ಸೆಪ್ಟೆಂಬರ್‌ನಿಂದ ಫೆಬ್ರವರಿ ತಿಂಗಳವರೆಗೆ ಕಂಡುಬರುತ್ತದೆ. ಹಣ್ಣಿನ ಒಳಭಾಗದಲ್ಲಿ ನೇರಳೆಕಾಯಿಯಂತಹ ಬೀಜ ಇರುತ್ತದೆ. ಕಾಡಿನ ಜೊತೆ ನಂಟಿರುವ ಜನತೆ ಇದನ್ನು ತಿನ್ನಲು ಯೋಗ್ಯ ಎಂದು ಹೇಳಿದರೂ ಇದರ ಬೀಜದಿಂದ ಹೊರಬರುವ ವಿಚಿತ್ರ ವಾಸನೆ ಬಾಯಿಯ ಹತ್ತಿರದಿಂದ ದೂರ ಮಾಡುತ್ತದೆ. ಬೇಕಾದರೆ ಮೂಸಿ ನೋಡಿ ಎಂದಾಗ ಮೂಗಿನ ಹತ್ತಿರ ತಂದೆ. ಅಬ್ಬ ಅಲ್ಲಿ ಹೊಮ್ಮಿದ ಗಬ್ಬು ವಾಸನೆ, ಕೆಲವೊಂದು ಬಸ್ ಸ್ಟ್ಯಾಂಡ್‌ಗಳ ಶೌಚಾಲಯ ನೆನಪಿಸಿತ್ತು!

ಈ ಹಣ್ಣಿನ ಒಳಭಾಗದಲ್ಲುವ ಬೀಜದ ಬಳಿ ಕೈ ಸವರಿ ನೋಡಿದರೆ, ರೇಷ್ಮೆ ಸೀರೆ ಮುಟ್ಟಿದಂತೆ ಕೈಗೆ ನುಣುಪಿನ ಅನುಭವವಾಗುತ್ತದೆ. ಒಮ್ಮೆಲೇ ನೋಡಲು ನಾಲ್ಕು ಹಣ್ಣಿನಂತೆ ಕಂಡುಬರುವ ಇದು ಒಂದೇ ಹಣ್ಣು. ಹಣ್ಣು ಒಣಗಿ ಒಡೆದಾಗ 4 ಭಾಗಗಳಾಗಿ ಬಹು ಸುಂದರವಾಗಿ ಗೋಚರಿಸುತ್ತದೆ. ಹುಲಿತರಡು ಮರದ ವೈಜ್ಞಾನಿಕ ಹೆಸರು ಸ್ಟೆರ್‌ಕ್ಯುಲಿಯ ಗುಟ್ಟಾಟ.

ಕೋಕೋ ಗಿಡದ ಜಾತಿಗೆ ಸೇರಿದ ಮರವಿದು. ಸಸ್ಯ ವಿಜ್ಞಾನ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಬಹು ಉಪಯುಕ್ತ ಇದು. ಉಜಿರೆಯ ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿಗಳು ಕುದುರೆಮುಖಕ್ಕೆ ಟ್ರೆಕ್ಕಿಂಗ್ ಹೋಗಿದ್ದಾಗ, ಅವರಿಗೆ ಈ ಹಣ್ಣು ಪಶ್ಚಿಮ ಘಟ್ಟ ವಲಯದಲ್ಲಿ ಸಿಕ್ಕಿತು. ಬಹಳ ಅಪರೂಪದ ಇದನ್ನು ಎಷ್ಟು ದಿನ ಬೇಕಾದರೂ ಇಡಬಹುದು ಎನ್ನುತ್ತಾರೆ ಈ ಕಾಲೇಜಿನ ಸಸ್ಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರಶಾಂತ್ ಕೆ.

**ಚಿತ್ರಲೇಖನ: ಇರ್ಷಾದ್ ಎಂ.ವೇಣೂರು**